# ಸಮಗ್ರ ಕಲಿಕೆಗೆ ಸದೃಢ ವಿಧಾನ



ಸುಶಮಾ ಶರ್ಮ

## ಮಾಡಿ ಕಲಿ – ಮಹಾರಾಷ್ಟ್ರದ ಸೇವಾಗ್ರಾಮದಲ್ಲಿರುವ ಆನಂದ ನಿಕೇತನ ಶಾಲೆಯಲ್ಲಿ ನಮ್ಮ ಅನುಭವ

ಆರು ಮತ್ತು ಏಳನೆಯ ತರಗತಿಯ ಪ್ರತಿಯೊಬ್ಬ ವಿದ್ಯಾರ್ಥಿಯೂ ಒಳಗೊಳ್ಳುವಂತೆ ಈರುಳ್ಳಿಯನ್ನು ಏಕಬೆಳೆಯಾಗಿ ಬೆಳೆಯುವ ಯೋಜನೆಯನ್ನು ನಾವು ಮೊದಲ ಬಾರಿಗೆ ಕೈಗೊಂಡೆವು. ಸಸಿಗಳು ತಯಾರಾಗಿದ್ದವು ಆದರೆ ಪಾತಿ ಮಾಡುವ ಕೆಲಸ ಇನ್ನೂ ಬಾಕಿ ಇತ್ತು. ತೋಟಗಾರಿಕಾ ಶಿಕ್ಷಕರು ಇದಕ್ಕೆ ಸಂಬಂಧಿಸಿದ ಪೂರ್ವ-ತಯಾರಿ ಕೆಲಸದಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಮುಖ್ಯಶಿಕ್ಷಕಿಯಾಗಿದ್ದರೂ ಈ ಕೆಲಸ ನನಗೆ ನನ್ನ ವಿದ್ಯಾರ್ಥಿಗಳಿಗಿದ್ದಷ್ಟೆ ಹೊಸತಾಗಿತ್ತು. ಎಲ್ಲರ ಜೊತೆಗೂಡಿ ಕೆಲಸ ಮಾಡಲು ನಾನು ಕೂಡ ಉತ್ಸುಕಳಾಗಿದ್ದೆ. ತೋಟಕ್ಕೆ ಹೋಗಿ ನೋಡಿದಾಗ ವಿದ್ಯಾರ್ಥಿಗಳೆಲ್ಲರೂ ಖುಶಿಯಾಗಿ ಕೆಲಸದಲ್ಲಿ ತೊಡಗಿಸಿಕೊಂಡಿದ್ದು ಕಾಣಿಸಿತು. ಮಣ್ಣನ್ನು ಸಡಿಲಗೊಳಿಸಿ, ಪಾತಿ ಮಾಡುವ ಕೆಲಸ ನಡೆಯುತ್ತಿತ್ತು. ಪಾತಿಗೆ ನೀರು ಹಾಯಿಸಿ, ಕಾಲುಗಳಿಂದ ಮಣ್ಣನ್ನು ಹದಗೊಳಿಸುತ್ತಿದ್ದರು. ಕೆಲಸದಲ್ಲಿ ಅವರ ತಲ್ಲೀನತೆ ಎಷ್ಟಿತ್ತೆಂದರೆ ತಮ್ಮ ಬಟ್ಟೆ ಕೊಳೆಯಾಗುವ ಬಗ್ಗೆ ಕೂಡ ಅವರಿಗೆ ಗೋಜಿರಲಿಲ್ಲ. ಕೊನೆಯಲ್ಲಿ ಎಲ್ಲರೂ ಸೇರಿ ಸಸಿಗಳನ್ನು ನೆಟ್ಟರು. ಕಳೆದ ವರ್ಷ ಈರುಳ್ಳಿ ಬೆಳೆ ಚೆನ್ನಾಗಿ ಬಂದಿತ್ತು. ಸಾವಯವ ಪದ್ಧತಿಯಲ್ಲಿ ಬೆಳೆದ ನಮ್ಮದೇ ತೋಟದ ಈರುಳ್ಳಿ ಬೆಳೆಯನ್ನು ಶಾಲಾ ಅಡುಗೆಯಲ್ಲಿ ಬಳಸಿದೆವು; ಉಳಿದಿದ್ದನ್ನು ಶಿಕ್ಷಕರು ಖರೀದಿಸಿದರು.

ಈರುಳ್ಳಿ ಬೆಳೆಯುವ ಯೋಜನೆಯ ಫಲವಾಗಿ ಈರುಳ್ಳಿಯು ಒಂದು ರೂಪಾಂತರಗೊಂಡ ಕಾಂಡ ಮತ್ತು ಅದರ ರೂಪಾಂತರಿತ ಕಾಂಡ (ಬಲ್ಬ್) ಬೆಳೆಯುವಾಗ ಮಣ್ಣಿನ ಅಡಿಯಲ್ಲಿ ಇರುತ್ತದೆ ಎಂಬುದನ್ನು ಕೆಲಸ ಮಾಡಿ ನೋಡಿ ಕಲಿಯುವುದು ಸುಲಭವಾಯಿತು. ಇದೇ ರೀತಿ ಅರಿಶಿನ, ಮೂಲಂಗಿ, ಕ್ಯಾರೆಟ್, ಬೀಟ್‌ರೂಟ್, ಇತ್ಯಾದಿ ರೂಪಾಂತರಗೊಂಡ ಕಾಂಡಗಳ ಸಸ್ಯಜಗತ್ತಿನ ಇತರ ಉದಾಹರಣೆಗಳೊಡನೆ ಸಂಬಂಧ ಕಲ್ಪಿಸುವುದು ಕೂಡ ಸಾಧ್ಯವಾಯಿತು. ಶಾಲಾ ಪಠ್ಯಕ್ರಮದ ಅತಿ ಮುಖ್ಯ ಭಾಗವಾಗಿ ಮಳೆಗಾಲ ಮತ್ತು ಹಿಂಗಾರಿನ ಸಮಯದಲ್ಲಿ ತರಕಾರಿ ಬೆಳೆಯುವುದನ್ನು ಅಳವಡಿಸಿಕೊಂಡದ್ದರಿಂದ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ವಿಶಿಷ್ಟವಾದ ಗಣನೀಯ ಕಲಿಕಾ ಅವಕಾಶ ಲಭ್ಯವಾಯಿತು. ಕೆಲವು ಉದಾಹರಣೆಗಳು ಹೀಗಿವೆ:

1. ಬೆಳೆ ಮತ್ತು ಕಳೆ ಒಳಗೊಂಡಂತೆ ವಿವಿಧ ಸಸ್ಯವರ್ಗಗಳ ಸ್ವರೂಪದ ಅವಲೋಕನ: ಅಂದರೆ ಎಲೆಗಳು, ಬೇರಿನ ವ್ಯವಸ್ಥೆ, ಕಾಂಡ ಮತ್ತು ರೆಂಬೆ ಒಡೆಯುವ ರೀತಿ, ಹೂಬಿಡುವುದು, ಹಣ್ಣಾಗುವುದು, ಬೀಜ, ಇತ್ಯಾದಿ. ಈ ಅವಲೋಕನದ ಮುಂದಿನ ಹಂತವಾಗಿ ಸಸ್ಯಗಳ ವರ್ಗೀಕರಣ, ಅವುಗಳ ಉಪಯೋಗ ಮತ್ತು ಅವುಗಳನ್ನು ಬೆಳೆಯುವಲ್ಲಿ ಎದುರಾಗುವ ತೊಂದರೆಗಳನ್ನು ತಿಳಿದುಕೊಳ್ಳುವುದು ಸುಲಭವಾಯಿತು.
2. ವಿವಿಧ ತರಕಾರಿ ಬೆಳೆಯಲು ಮಾಡಬೇಕಾದ ಪೂರ್ವತಯಾರಿಯ ತಿಳುವಳಿಕೆ: ಮಣ್ಣು ಹದಮಾಡುವುದು, ಕಾಯಿ ತರಕಾರಿಗಳು, ಸೊಪ್ಪು, ಕಾಂಡ ಗೆಡ್ಡೆಗಳು ಇತ್ಯಾದಿಗಳ ಬಿತ್ತನೆಯ ವಿಧಾನ ಮತ್ತು ಈ ಸಂದರ್ಭದಲ್ಲಿ ಗಮನಿಸಬೇಕಾದ ಮುಖ್ಯ ಅಂಶಗಳ ಅರಿವು.
3. ಮಣ್ಣಿನ ಫಲವತ್ತತೆ: ಮಣ್ಣನ್ನು ಜೀವಂತವಾಗಿಡುವಲ್ಲಿ ಕೀಟಗಳು, ಎರೆಹುಳಗಳು, ಶಿಲೀಂಧ್ರಗಳು ಮತ್ತು ಸೂಕ್ಷ್ಮಾಣುಜೀವಿಗಳು ವಹಿಸುವ ಪಾತ್ರವನ್ನು ಅರ್ಥಮಾಡಿಕೊಳ್ಳುವುದು. ವ್ಯವಸಾಯದಲ್ಲಿ ಸಾಮುದಾಯಿಕ ಕೀಟಗಳಾದ ಇರುವೆ, ಗೆದ್ದಲು ಹುಳ, ಮತ್ತು ಜೇನು ನೊಣಗಳು ವಹಿಸುವ ಪಾತ್ರವನ್ನು ಅರ್ಥಮಾಡಿಕೊಳ್ಳುವುದು.
4. ವಿವಿಧ ರೀತಿಯಲ್ಲಿ ಜೈವಿಕಕಸರಾಶಿಯ (BIOMASS) ಅಂದರೆ ಕೊಟ್ಟಿಗೆ ಗೊಬ್ಬರ, ಹಸಿಗೊಬ್ಬರದ ಮರುಬಳಕೆ: ಸೆಗಣಿ ಮತ್ತು ಇತರ ಪೋಷಕಾಂಶವುಳ್ಳ ಸಾವಯವ ಪೂರಕಗಳನ್ನು ಬಳಸುವ ಮೂಲಕ ಕಂಪೋಸ್ಟ್ ಮಾಡುವ ವಿಧಾನದ ತಿಳುವಳಿಕೆ
5. ಉಪದ್ರವಕಾರಿ ಕೀಟಗಳು ಮತ್ತು ಉಪಯೋಗಕಾರಿ ಕೀಟಗಳನ್ನು ಮತ್ತು ಅವುಗಳ ಜೀವನಚಕ್ರವನ್ನು ಅವಲೋಕಿಸುವುದು ಮತ್ತು ಕೀಟ ನಿವಾರಕಗಳನ್ನು ತಯಾರಿಸಿ ಸಿಂಪಡಿಸುವುದು.
6. ಕಾಲಕಾಲಕ್ಕೆ ಕಳೆಕೀಳುವುದು, ಕಳೆಗುದ್ದಲಿ ಬಳಸಿ ಮಣ್ಣು ಸಡಿಲಗೊಳಿಸುವುದು, ನೀರುಣಿಸುವುದು, ಗೊಬ್ಬರ ಹಾಕುವುದು, ಔಷಧಿ ಸಿಂಪಡಿಸುವುದು, ಇತ್ಯಾದಿ ತೋಟ ಸಂಬಂಧಿ ಕೆಲಸದ ಮೂಲಕ ತರಕಾರಿ ತೋಟವನ್ನು ಕಾಪಾಡಿ, ಬೆಳೆಸುವುದು. ತೋಟದ ಕೆಲಸಕ್ಕೆ ಅಗತ್ಯವಾದ

ಕುಡುಗೋಲು, ಕವಲುಗುದ್ದಲಿ, ಗುದ್ದಲಿ, ಇತ್ಯಾದಿ ಸಲಕರಣೆಗಳನ್ನು ಬಳಸುವುದನ್ನು ಕಲಿಯುವುದು.

7. ದ್ಯುತಿಸಂಶ್ಲೇಷಣೆ, ಭಾಷ್ಪವಿಸರ್ಜನೆ, ಪರಾಗಸ್ಪರ್ಶ ಇತ್ಯಾದಿ ವೈಜ್ಞಾನಿಕ ಪ್ರಕ್ರಿಯೆಗಳಲ್ಲಿ ಸೂರ್ಯನ ಬೆಳಕಿನ ಪಾತ್ರವನ್ನು ಅರ್ಥಮಾಡಿಕೊಳ್ಳುವುದು.
8. ತರಕಾರಿ ಬೆಳೆಯಲು ಜಾಗವನ್ನು ಅಳೆಯುವುದು ಮತ್ತು ವಿನ್ಯಾಸಗೊಳಿಸುವುದು. ಸಂಕಲನ ಮತ್ತು ಗುಣಾಕಾರದ ಆಧಾರದ ಮೇಲೆ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಎಷ್ಟು ಗಿಡಗಳನ್ನು ನೆಡಬಹುದು ಎಂಬುದನ್ನು ಲೆಕ್ಕ ಮಾಡಲು ಅಥವ ಅಂದಾಜು ಮಾಡಲು ಕಲಿಯುವುದು. ಸಾಗುವಳಿ ಪ್ರದೇಶ ಮತ್ತು ಖಾಲಿ ಪ್ರದೇಶದ ಸುತ್ತಳತೆ ಮತ್ತು ವಿಸ್ತೀರ್ಣವನ್ನು ಅಳೆಯುವುದು. ನಕ್ಷೆ ಬಿಡಿಸುವುದನ್ನು ಕಲಿಯುವುದು. ಫಸಲಿನ ತೂಕ ಅಳೆಯುವುದು. ಫಸಲಿನ ದಾಖಲೆಗಳನ್ನು ಇಡುವುದು. ಬೆಳೆದ ಬೆಳೆಯನ್ನು ಮಾರಾಟ ಮಾಡುವುದು ಇತ್ಯಾದಿ.
9. ಹವಾಮಾನ ದಾಖಲೆಯನ್ನು ಇಡುವುದು, ಉದಾಹರಣೆಗೆ, ಗರಿಷ್ಠ ಮತ್ತು ಕನಿಷ್ಠ ತಾಪಮಾನ, ವಾತಾವರಣದಲ್ಲಿನ ತೇವಾಂಶ, ಮಳೆಯ ಪ್ರಮಾಣ, ಇತ್ಯಾದಿ. ಇದನ್ನು ಗ್ರಾಫಿನ ಸಹಾಯದಿಂದ ಪ್ರಸ್ತುತಪಡಿಸುವುದನ್ನು ಕಲಿಯುವುದು.
10. ಸಸಿ ಬೆಳಸುವ ವಿಧಾನಗಳನ್ನು ತಿಳಿದುಕೊಳ್ಳುವುದು. ಗುಂಡಿ ತೋಡುವುದು ಮತ್ತು ಮರದ ಸಸಿ ನೆಡುವುದು. ಮರದ ಸಸಿಗಳಿಗೆ ನೀರೂಡಿಸಲು ಸರಳ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸುವುದು. ವಿವಿಧ ನೀರಾವರಿ ಪದ್ಧತಿಗಳ ಸಾಮ್ಯತೆ ಮತ್ತು ಭಿನ್ನತೆಗಳನ್ನು ಅರ್ಥಮಾಡಿಕೊಳ್ಳುವುದು.
11. ನೀರಿನ ಅತೀವ ಕೊರತೆ ಮತ್ತು ಅತಿ ಹೆಚ್ಚು ನೀರು ಹರಿಯುವಿಕೆ ಇವೆರಡು ಉಂಟುಮಾಡುವ ತೊಂದರೆಗಳನ್ನು ತಿಳಿದುಕೊಳ್ಳುವುದು.
12. ಅಂತರ್ಜಲದ ಅತಿಬಳಕೆಯಿಂದ ಉಂಟಾಗುವ ಸಮಸ್ಯೆಗಳು, ಲಭ್ಯ ನೀರಿನ ಅಸಮಾನ ಹಂಚಿಕೆ, ನೀರಿನ ಅತಿ ಹೆಚ್ಚಿನ ಬಳಕೆಗೆ ಕಾರಣವಾಗುವ ಮಾರುಕಟ್ಟೆ ಪ್ರೇರಿತ ವ್ಯವಸಾಯ, ಏಕಬೆಳೆ, ಸ್ಥಳೀಯವಾಗಿ ಅವಶ್ಯವಾದ ಪೌಷ್ಟಿಕಾಂಶಗಳ ಪೂರೈಕೆಯಲ್ಲಿ ಉಂಟಾಗುವ ಅಸ್ಥಿರತೆ, ಇತ್ಯಾದಿ ಗಹನ ವಿಚಾರಗಳ ಬಗ್ಗೆ ಸೂಕ್ಷ್ಮ ತಿಳುವಳಿಕೆ ಬೆಳೆಸಿಕೊಳ್ಳುವುದು.
13. ಲಿಂಗ ತಾರತಮ್ಯ ಅರ್ಥ ಮಾಡಿಕೊಳ್ಳುವುದು. ಉದಾಹರಣೆಗೆ, ಸಾಂಪ್ರದಾಯಿಕವಾಗಿ ನೀರನ್ನು ಹೊತ್ತುತರುವ ಜವಾಬ್ದಾರಿ ಹೆಂಗಸರಿಗೇ ಹೊರಿಸುವುದರಿಂದ ನೀರಿನ ಕೊರತೆ ಮಹಿಳೆಯರ ಮೇಲೆ ಬೀರುವ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳುವುದು
14. ತನ್ನದೇ ಆದ ಪ್ರದೇಶದಲ್ಲಿ ಬೆಳೆ ಕಾಪಾಡಿ ಬೆಳಸುವ ಮೂಲಕ ಸ್ವತಂತ್ರವಾಗಿ ವ್ಯವಸಾಯ ಮಾಡುವ ಸಾಮರ್ಥ್ಯ ಬೆಳೆಸಿಕೊಳ್ಳುವುದು ಮತ್ತು ಇನ್ನು ಉತ್ತಮವಾಗಿ ಕಾರ್ಯನಿರ್ವಹಿಸಲು ಇತರರೊಂದಿಗೆ ಜೊತೆಗೂಡಿ, ಗುಂಪಿನಲ್ಲಿ ಕೆಲಸ ಮಾಡುವ ಸಾಮರ್ಥ್ಯ ಬೆಳೆಸಿಕೊಳ್ಳುವುದು. ಎಲ್ಲರೂ ಒಟ್ಟಾಗಿ ನಿರ್ಧರಿಸಿದ ನಿಯಮಗಳಂತೆ ಕೆಲಸ ಮತ್ತು ಲಾಭವನ್ನು ಹಂಚಿಕೊಳ್ಳುವುದನ್ನು ಕಲಿಯುವುದು. ಇಂತಹ ಸಾಂಪ್ರದಾಯಿಕ ಪಾಲು ಹಂಚಿಕೊಳ್ಳುವ ಇನ್ನೂ ಚಾಲ್ತಿಯಲ್ಲಿರುವ ಕೆಲವು ಸಮುದಾಯಗಳ ಸಹಕಾರಿ ಪದ್ಧತಿಗಳನ್ನು ಕುರಿತು ಅರಿವು ಬೆಳೆಸಿಕೊಳ್ಳುವುದು.
15. ಭೂಸಾರ ಬೀಳಾಗುವುದು, ಅತಿಯಾದ ಕೀಟನಾಶಕ ಮತ್ತು ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಉಂಟಾಗುವ ಮಾಲಿನ್ಯ, ಆಹಾರ ಮತ್ತು ಪೌಷ್ಟಿಕಾಹಾರ ಭದ್ರತೆ, ಆಹಾರದಲ್ಲಿನ ಜೈವಿಕ ವೈವಿಧ್ಯತೆ, ಇತ್ಯಾದಿ ವಿಚಾರಗಳನ್ನು ಹೆಚ್ಚಿನ ಓದಿನ ಮೂಲಕ ಅರ್ಥಮಾಡಿಕೊಳ್ಳುವುದು.
16. ಮಾರುಕಟ್ಟೆಗೆ ಸಂಬಂಧಿಸಿದ ಅನೇಕ ವಿಚಾರಗಳ ತಿಳುವಳಿಕೆ. ತಾವು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಕೃಷಿಕರು ಅನುಭವಿಸುವ ಅನ್ಯಾಯ, ಸೂಕ್ತವಲ್ಲದ ಆಮದು ಮತ್ತು ರಫ್ತಿನ ನೀತಿಗಳು, ಬಿತ್ತನೆ ಬೀಜಗಳಿಗಾಗಿ, ಗೊಬ್ಬರ ಮತ್ತು ಕೀಟನಾಶಕಗಳಿಗಾಗಿ ಕೃಷಿಕರು ತೆರಬೇಕಾದ ಬೆಲೆ ಹೇಗೆ ಅವರ ಅರ್ಥವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಸುದ್ದಿಸಮಾಚಾರಗಳು ವೃತ್ತ ಪತ್ರಿಕೆಗಳ ಲೇಖನಗಳು ಮತ್ತು ಪರಿಣಿತರೊಂದಿಗೆ ಚರ್ಚೆ ನಮ್ಮ ಅರಿವನ್ನು ಹೇಗೆ ಸಮೃದ್ಧ ಗೊಳಸುತ್ತದೆ.
17. ಯಾವ ಬೆಳೆಯನ್ನು ಯಾವಾಗ, ಹೇಗೆ ಬೆಳೆಯಬೇಕು ಎಂಬ ಯೋಜನೆ, ಅಂತರ್ಜಲದ ಅತಿಯಾದ ಬಳಕೆ ಮತ್ತು ಮಣ್ಣಿನ ಕ್ಷಾರಾಂಶದಲ್ಲಿ ಹೆಚ್ಚಳ ಇತ್ಯಾದಿಗಳಿಗೆ ಕಾರಣವಾಗಿರುವ ಅತಿ ನೀರಿನ ಅವಶ್ಯಕತೆ ಇರುವ ಬೆಳೆಗಳ ಅರಿವು ಇತ್ಯಾದಿ.
18. ಕೊನೆಯದಾಗಿ ಆದರೆ ಅಷ್ಟೆ ಮುಖ್ಯವಾಗಿ ಹೇಳುವುದಾದರೆ ದುಡಿಮೆ ಎನ್ನುವುದು ನಮ್ಮ ಉಳಿವಿಗೆ ಅತಿ ಅವಶ್ಯಕ ಮತ್ತು ನಾವು ಅದನ್ನು ಮತ್ತು ಅದರಲ್ಲಿ ತೊಡಗಿಕೊಂಡಿರುವ ವ್ಯಕ್ತಿಗಳನ್ನು ಗೌರವಿಸಬೇಕು ಎಂಬ ಮಹತ್ವದ ತಿಳುವಳಿಕೆ ನೀಡುವುದು.

ಈ ಮೇಲಿನ ಪಟ್ಟಿಯಲ್ಲಿ ಕೊಟ್ಟಿರುವ ಕಲಿಕಾ ಉದ್ದೇಶಗಳನ್ನು ವಿದ್ಯಾರ್ಥಿಗಳ ವಯೋಮಾನ ಮತ್ತು ಕಲಿಕಾ ವರ್ಗಕ್ಕೆ ತಕ್ಕಂತೆ ವಿಸ್ತಾರ ಮಾಡಿಕೊಳ್ಳಬಹುದು. ಇಲ್ಲಿ ನಾವು ಕುರಿತಿಟ್ಟು ಹೇಳುವುದೇನೆಂದರೆ ಶಾಲಾ ಪಠ್ಯಕ್ರಮದ ಅವಿಭಾಜ್ಯ ಅಂಗವಾಗಿ ಕೃಷಿಯನ್ನು ಅಳವಡಿಸಿಕೊಳ್ಳುವುದರಿಂದ ಅದು ವಿಷಯಗಳ ವಿಂಗಡನೆಯ ಶಾಲಾ ಪಠ್ಯಪುಸ್ತಕದಿಂದ ಕಲಿಯಲು ನಿರೀಕ್ಷಿಸಿದ ಶೈಕ್ಷಣಿಕ ಕಲಿಕೆಯ ಜೊತೆಗೆ ಒಂದು ಸಮಗ್ರ ಶ್ರೀಮಂತ ಮತ್ತು ವಾಸ್ತವ ಜಗತ್ತಿನ ನಿಕಟ ಪರಿಚಯವನ್ನು ವಿವಿಧ ಆಯಾಮಗಳ ಕೌಶಲ್ಯಗಳನ್ನು

ಕಲಿಸಿಕೊಡುತ್ತದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಒಟ್ಟಾಗಿ ಕೆಲಸ ಮಾಡುವುದರಿಂದ ಅವರ ನಡುವಿನ ಅಧಿಕಾರಯುತ ಶ್ರೇಣಿವ್ಯವಸ್ಥೆಯ ಸಂಬಂಧಗಳ ಗೋಡೆಗಳು ಇಲ್ಲವಾಗುತ್ತವೆ. ಇಷ್ಟೇ ಅಲ್ಲದೆ ಅಡುಗೆ ಕೆಲಸ, ವಸ್ತ್ರ ಕಲೆ (ಬಟ್ಟೆ ತಯಾರಿಸುವ ಕಲೆ) ಮತ್ತು ಶಕ್ತಿಯ ಬಳಕೆಗೆ ಸಂಬಂಧಿಸಿದಂತಹ ಇನ್ನು ಕೆಲವು ಚಟುವಟಿಕೆಗಳ ಕಲಿಕೆ ಮತ್ತು ಕಲಿಕೆಯ ಅನ್ವಯಕ್ಕೆ ಅವಕಾಶ ಮಾಡಿಕೊಡುವಂತೆ ವಿನ್ಯಾಸಗೊಳಿಸಿದ್ದೇವೆ. ಇನ್ನೂ ಅನೇಕ ಚಟುವಟಿಕೆಗಳನ್ನು ಶಾಲೆಯ ಸ್ಥಿತಿ ಗತಿ ಮತ್ತು ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸಗೊಳಿಸಬಹುದು.

### ದುಡಿಮೆ: ಪರಿಪೂರ್ಣ ಕಲಿಕೆಗೆ ಸಾಧನ

ಮುಖ್ಯವಾಗಿ ಕೈಕೆಲಸವನ್ನು ಶಾಲಾ ಪಠ್ಯಕ್ರಮದಲ್ಲಿ ಸೇರಿಸುವುದನ್ನು ಕೇವಲ 'ವೃತ್ತಿಶಿಕ್ಷಣ' ಎಂದು ನೋಡಬಾರದು. ಅಪಾಯವನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ಅದಕ್ಕೆ ಕಲಿಕೆಯಲ್ಲಿ ಇನ್ನೂ ವಿಶಾಲವಾದ ಪಾತ್ರವಿದೆ ಮತ್ತು ಅದನ್ನು ಪರಿಪೂರ್ಣ ಹಾಗು ಸಮಗ್ರ ಕಲಿಕೆಯ ಸಾಧನವಾಗಿ ಬಳಸಬಹುದಾಗಿದೆ. ಇದು ಸಾಂಪ್ರದಾಯಿಕ ಪಠ್ಯಪುಸ್ತಕ ಆಧಾರಿತ ಬೋಧನೆಗಿಂತ ಇನ್ನೂ ಹೆಚ್ಚು ವೃತ್ತಿಯ ಅಂಶಗಳನ್ನು ಹೊಂದಿರುವುದನ್ನು ಅಗತ್ಯಪಡಿಸುವ ಕಾರಣ, ಶಿಕ್ಷಕರಲ್ಲಿ ಇದಕ್ಕೆ ಅಗತ್ಯವಾದ ಕಾಣ್ಕೆ, ಪ್ರೇರಣೆ ಮತ್ತು ಸಾಮರ್ಥ್ಯವನ್ನು ಬೆಳೆಸಬೇಕಾದ ಅವಶ್ಯಕತೆ ಇದೆ. ಸರಳ ಮತ್ತು ಬುನಾದಿ ಹಸ್ತ ಕಲೆ ಮತ್ತು ಕೆಲಸಗಳು ಹೆಚ್ಚು ಗಮನಿಸ ಬಹುದಾಗಿರುತ್ತವೆ ಮತ್ತು ಅಗತ್ಯಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಳ್ಳುವುದು ಸುಲಭ. ಹೀಗಾಗಿ ಇವು ಕಲಿಕೆಗೆ ಸ್ಪಷ್ಟ ಸಂದರ್ಭ ಒದಗಿಸುತ್ತವೆ. ನಮ್ಮ ಸುತ್ತಲಿನ ಪರಿಸರ ಮತ್ತು ಸ್ಥಳೀಯ ಸಮುದಾಯಕ್ಕೆ ಸಂಬಂಧಿಸಿದ ಚಟುವಟಿಕೆಗಳ ಸಮ್ಮಿಳನ ಕಲಿಕೆಗೆ ಸಮೃದ್ಧ ಸಂದರ್ಭವನ್ನು ಒದಗಿಸುತ್ತವೆ. ಸಹಭಾಗಿ ಮಾದರಿಯಲ್ಲಿ ಶಾಲೆಯನ್ನು ನಡೆಸುವುದೇ ಕಲಿಕೆಗೆ ಒಂದು ಉತ್ತಮ ಮಾರ್ಗವಾಗಬಹುದು .

ದೈಹಿಕ ಕೆಲಸವು ವಿದ್ಯಾರ್ಥಿಗಳ ವಿಷಯ ಗ್ರಹಿಕೆಯ, ದೈಹಿಕ, ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಯನ್ನು ಪೋಷಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬ ನಂಬಿಕೆಯ ಆಧಾರದ ಮೇಲೆ ನಾವು ನಮ್ಮ ಶಾಲೆಯ ಆರಂಭದಲ್ಲಿಯೇ ಅದನ್ನು ಪಠ್ಯಕ್ರಮದ ಒಂದು ಅತ್ಯಗತ್ಯ ಭಾಗವಾಗಿಸುವ ನಿರ್ಧಾರವನ್ನು ಕೈಗೊಂಡೆವು. ಕಲಿಕಾ ಅನುಭವವನ್ನು ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಿದರೆ, ಅದು ವಿದ್ಯಾರ್ಥಿಗಳ ಪರಿಪೂರ್ಣ ವ್ಯಕ್ತಿತ್ವಮತ್ತು ಜವಾಬ್ದಾರಿಯುತ ಪೌರತ್ವವನ್ನು ಬೆಳೆಸುವಲ್ಲಿ ಸಹಾಯ ಮಾಡುತ್ತದೆ ಎಂಬುದು ಇದರ ಹಿಂದಿದ್ದ ನಂಬಿಕೆ.

ಇತರ ಅನೇಕರಂತೆ ನಾವು ಕೂಡ ಮಕ್ಕಳ ಸಾಮರ್ಥ್ಯ ಮತ್ತು ಸಾಧ್ಯತೆಯಲ್ಲಿರುವ ಭಿನ್ನತೆಯನ್ನು ಗೌರವಿಸಲು ಅಸಮರ್ಥವಾಗಿರುವ, ಪಠ್ಯಪುಸ್ತಕದ ಮೇಲೆ ಪೂರ್ಣ ಅವಲಂಬಿತವಾಗಿರುವ ಮತ್ತು ಸ್ಪರ್ಧೆಯನ್ನು ಪೋಷಿಸುವ ಶಾಲಾ ವ್ಯವಸ್ಥೆಯ ಬಗ್ಗೆ ಆತಂಕಿತರಾಗಿದ್ದೆವು. ಅಷ್ಟೇ ಅಲ್ಲದೆ ದೈಹಿಕ ಶ್ರಮ ಪಡುವ ಜನರ ಬಗ್ಗೆ ನಮ್ಮ ಸಮಾಜ ತೋರುವ ಅಸಡ್ಡೆ ಕೂಡ ನಮ್ಮನ್ನು ಚಿಂತಿಸುವಂತೆ ಮಾಡಿತ್ತು. ಹಲವು ಪ್ರಶ್ನೆಗಳು ನಮ್ಮನ್ನು ಕಾಡುತ್ತಿದ್ದವು. ಉದಾಹರಣೆಗೆ,

- ಉತ್ಪಾದನಾ ಕೆಲಸ ಮತ್ತು ಕೈಕೆಲಸವನ್ನು ನಾವು ಬೌದ್ಧಿಕ ಕೆಲಸಕ್ಕಿಂತ ಭಿನ್ನವಾಗಿ ನೋಡುವುದೇಕೆ?
- ಶ್ರಮ ದುಡಿಮೆಗೆ ಏಕೆ ಕಡಿಮೆ ವೇತನ ನೀಡುತ್ತೇವೆ?
- ಈ ಪರಿಸ್ಥಿತಿಗೆ ಕೇವಲ ಬೇಡಿಕೆ ಮತ್ತು ಪೂರೈಕೆ ಮಾತ್ರ ಕಾರಣವೇ ಅಥವ ಕೆಲವೇ ಜನರ ಹಿತಾಸಕ್ತಿಯಿಂದ ಪ್ರಜ್ಞಾಪೂರ್ವಕವಾಗಿ ನಿರ್ದಿಷ್ಟ ರೀತಿಯ ಶ್ರಮವನ್ನು ಅಪಮೌಲ್ಯಗೊಳಿಸಿದ ನಮ್ಮ ವಿಕೃತ ಮೌಲ್ಯ ವ್ಯವಸ್ಥೆಗೂ ಇದಕ್ಕೂ ಸಂಬಂಧವಿದೆಯೇ?
- ಉತ್ಪಾದಕ ಕೆಲಸಕ್ಕೆ ಬೌದ್ಧಿಕ ಆಯಾಮವೇ ಇಲ್ಲವೇ?
- ಮನುಷ್ಯನ ಸೃಜನಶೀಲತೆಯನ್ನು ಹೊರತರಲು ಮತ್ತು ಜೀವನದಲ್ಲಿ ಯಶಸ್ವಿ ಎಂದೆನಿಸಿಕೊಳ್ಳಲು ಕೇವಲ ಪುಸ್ತಕ ಸೀಮಿತ ಜ್ಞಾನ ಮಾತ್ರ ಸಾಕೇ?
- ಮನುಷ್ಯನ ಬುದ್ಧಿ ಬೆಳೆಸುವಲ್ಲಿ ದೈಹಿಕ ಪರಿಶ್ರಮದ ಕೆಲಸದ ಪಾತ್ರವೇನಾದರೂ ಇದೆಯೇ?

ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಎಲ್ಲರೂ ಸೇರಿ ಈ ಪ್ರಶ್ನೆಗಳ ಬಗ್ಗೆ ಚಿಂತಿಸಬೇಕಾಗಿರುವುದು ಅವಶ್ಯಕ ಎಂದು ನಮಗನ್ನಿಸುತ್ತದೆ. ಈ ಚರ್ಚೆಗಳಲ್ಲಿ ಪೋಷಕರನ್ನು ಕೂಡ ಸೇರಿಸಿಕೊಳ್ಳುವುದರಿಂದ ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

### ಶಿಕ್ಷಣದ ಉದ್ದೇಶದ ಕುರಿತಾಗಿ ಇರುವ ಅಸ್ಪಷ್ಟತೆಯು ಸಮಾಜದ ಅವ್ಯವಸ್ಥೆಗೆ ಕಾರಣವಾಗಿದೆ

ಶಿಕ್ಷಣವು ಕೇವಲ ಜ್ಞಾನ ಗ್ರಹಣೆಯ ಆಯಾಮವನ್ನು ಮಾತ್ರ ಒಳಗೊಂಡಿರದೆ, ಸಮಾಜದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಆಯಾಮಗಳನ್ನು ಕುರಿತೂ ವ್ಯವಹರಿಸ ಬೇಕಾಗುತ್ತದೆ. ಏಕೆಂದರೆ ಶಿಕ್ಷಣದ ಮೂಲ ಉದ್ದೇಶವೇ ಮನುಷ್ಯನನ್ನು ಸಾಮಾಜಿಕವಾಗಿ ಮತ್ತು ವೈಯಕ್ತಿಕವಾಗಿ ಸಬಲಗೊಳಿಸುವುದು ಮತ್ತು ಸಮತೆ, ನ್ಯಾಯಪರತೆ ಮತ್ತು ಅಹಿಂಸೆಯ ಬುನಾದಿಯ ಮೇಲೆ ಒಂದು ಸಮಸಮಾಜವನ್ನು ಕಟ್ಟಲು ಸಮರ್ಥರಾಗಿರುವ ನಾಗರಿಕ ಸಮುದಾಯವನ್ನು ಬೆಳೆಸುವುದಾಗಿದೆ. ಶಿಕ್ಷಣದ ಉದ್ದೇಶ ಮನುಷ್ಯನ 'ಚಾರಿತ್ರ್ಯವನ್ನು ಬೆಳೆಸುವುದಾಗಿದೆ' ಎಂದು ಗಾಂಧೀಜಿ ಹೇಳಿದ್ದಾರೆ. ಇದು ಸಾಧ್ಯ ಆದಾಗ ಮಾತ್ರ ಮನುಷ್ಯನಲ್ಲಿ ಸಮಾಜದ ಹಿತದೃಷ್ಟಿಗೆ ಅನುಗುಣವಾಗಿ ವರ್ತಿಸುವ ನೈತಿಕ ಸ್ಥೈರ್ಯ ಮತ್ತು ಆತ್ಮವಿಶ್ವಾಸ ಬೆಳೆಯುತ್ತದೆ.

ಸ್ವಾತಂತ್ರ್ಯಾನಂತರ, ಒಂದು ಗಣತಂತ್ರವಾಗಿ ನಾವು ನಮ್ಮ

ಸಂವಿಧಾನವನ್ನು ಅಂಗೀಕರಿಸಿದೆವು. ನಮ್ಮ ಸಂವಿಧಾನವು ನಮಗೆ ಕೆಲವು ಹಕ್ಕು ಗಳನ್ನು ಕೊಟ್ಟಿದೆ – ಸ್ವಾತಂತ್ರ್ಯದ ಹಕ್ಕು, ಸಮಾನತೆಯ ಹಕ್ಕು, ಸಹೋದರತೆ ಹಕ್ಕು ಮತ್ತು ನ್ಯಾಯದ ಹಕ್ಕು, ಇತ್ಯಾದಿ. ಆದರೆ ನಮ್ಮ ಯಾವುದೇ ಹಕ್ಕುಗಳನ್ನು ನಾವು ನಮ್ಮ ಕರ್ತವ್ಯಗಳ ಪಾಲನೆ ಮಾಡದೆ ಅನುಭವಿಸಲು ಸಾಧ್ಯವಿಲ್ಲ. ನಮ್ಮ ಮಕ್ಕಳು ಇದನ್ನೆಲ್ಲ ಕಲಿಯಲು ನಾವು ಹೇಗೆ ಸಹಾಯ ಮಾಡಬಹುದು? ಶಿಕ್ಷಕರು ಮತ್ತು ವಯಸ್ಕರು ಈ ದಾರಿಯಲ್ಲಿ ತಾವೇ ವಿಷಯ ಕಲಿಯುವವರಾಗುವುದು ಹೇಗೆ? ನಮ್ಮ ಶೈಕ್ಷಣಿಕ ಯೋಜನೆಯನ್ನು ರೂಪಿಸುವಾಗ ನಾವು ಈ ಯಾವುದೇ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾವಿಂದು ತಾಂತ್ರಿಕವಾಗಿ ತುಂಬ ಮುಂದುವರಿದಿರುವ ಮತ್ತು ಕೇಂದ್ರಿತವಾಗಿರುವ ಒಂದು ಜಾಗತಿಕ ಸಮುದಾಯದಲ್ಲಿ ಬದುಕುತ್ತಿದ್ದೇವೆ. ನಮ್ಮ ದೇಶ ಕೂಡ ಈ ತಾಂತ್ರಿಕ ಪ್ರಗತಿಯಲ್ಲಿ ಹಿಂದೆ ಬಿದ್ದಿಲ್ಲ. ಆದರೆ ನಾವು ಒಂದು ರಾಷ್ಟ್ರವಾಗಿ ನಮ್ಮ ಎಲ್ಲ ಜನತೆಗೆ ಪೌಷ್ಟಿಕಾಹಾರ ಭದ್ರತೆ, ಸ್ವಚ್ಛ ನೀರು, ನೈರ್ಮಲ್ಯ, ಪ್ರಾಥಮಿಕ ಶಿಕ್ಷಣ, ಮತ್ತು ಮೂಲಭೂತ ಆರೋಗ್ಯ ಸೇವೆಯನ್ನು ಒದಗಿಸುವ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಇನ್ನೂ ಯಶಸ್ವಿಯಾಗಿಲ್ಲ. ಒಂದು ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯಾಗಿ ನಾವು ನಮ್ಮ ಮೂಲಭೂತ ಅವಶ್ಯಕತೆಗಳಿಗೆ ಸೂಕ್ಷ್ಮವಾಗಿ ಪ್ರತಿಸ್ಪಂದಿಸುವುದರಲ್ಲಿ ಮತ್ತು ಅವುಗಳಿಗೆ ಆದ್ಯತೆ ನೀಡುವಲ್ಲಿ ವಿಫಲರಾಗಿದ್ದೇವೆ.

ಪ್ರಭಾವಿ ಸ್ಥಾನಗಳಲ್ಲಿ ಕುಳಿತಿರುವ ಬುದ್ಧಿಜೀವಿ ಸಮುದಾಯವು ಸಕಲರ ಒಳಿತನ್ನು ಸಾಧ್ಯವಾಗಿಸುವ ನೀತಿ ನಿಯಮಾವಳಿಗಳನ್ನು ರೂಪಿಸುವಲ್ಲಿ ಮತ್ತು ಕಾರ್ಯಾಚರಣೆಗೆ ತರುವಲ್ಲಿ ವಿಫಲವಾಗಿರುವಂತಿದೆ. ಈಗಿರುವ ವ್ಯವಸ್ಥೆಯಿಂದ ಲಾಭಪಡೆಯುತ್ತಿರುವ ಜನರು ತಮ್ಮ ಸ್ವಾರ್ಥಸಾಧನೆಗೆ ಹೆಚ್ಚು ಹೆಚ್ಚು ಕಾಳಜಿ ಹೊಂದಿರುವುದರಿಂದ ನಗರ ಮತ್ತು ಹಳ್ಳಿ ಪ್ರದೇಶದಲ್ಲಿ ದೈಹಿಕ ಶ್ರಮಪಟ್ಟು ದುಡಿಯುವ ಜನರು ಮೂಲೆಗುಂಪಾಗುತ್ತಿರುವ ಪ್ರಮಾಣ ದಿನೇ ದಿನೇ ಹೆಚ್ಚಾಗುತ್ತಿದೆ. ಕಹಿಸತ್ಯವೇನೆಂದರೆ ಈ ಪ್ರಭಾವಿ ಮಂದಿಯು ತಾವು ಕೈಗೊಳ್ಳುವ ನಿರ್ಧಾರಗಳು ನಮ್ಮ ಕಡಿಮೆ ಸವಲತ್ತಿನ ಜನರ ಮೇಲೆ ಮತ್ತು ದೀರ್ಘ ಕಾಲಾವಧಿಯಲ್ಲಿ ಪರಿಸರದ ಮೇಲೆ ಯಾವ ಪರಿಣಾಮ ಬೀಳಬಹುದು ಎಂಬುದನ್ನು ಅರ್ಥಮಾಡಿಕೊಳ್ಳಲು ಕೂಡ ಸಮರ್ಥರಾಗಿಲ್ಲ. ನಮ್ಮ ಪರಿಸರ ಸಮಸ್ಯೆಗಳು ದಿನೇ ದಿನೇ ತೀವ್ರವಾಗುತ್ತಿರುವುದನ್ನು ನೋಡಿದಾಗ, ಮಾರುಕಟ್ಟೆ ಬಲಗಳು ಜಾಗತಿಕವಾಗಿ ಉತ್ತೇಜಿಸುತ್ತಿರುವ 'ಅಭಿವೃದ್ಧಿ' ಮತ್ತು ಪ್ರಗತಿ ಎಂಬ ಪದಗಳನ್ನು ಅರ್ಥ ಮಾಡಿಕೊಳ್ಳುವ ಬಗೆಯನ್ನೇ ಪ್ರಶ್ನಿಸಬೇಕಾಗುತ್ತದೆ.

ಜಗತ್ತಿನಾದ್ಯಂತ ಶ್ರೀಮಂತರು ಮತ್ತು ಬಡವರು ಇಬ್ಬರೂ ಈ ಪರಿಕಲ್ಪನೆಯನ್ನು ಮತ್ತೊಮ್ಮೆ ವಿಶ್ಲೇಷಿಸಬೇಕಾಗಿದೆ. ಮನುಷ್ಯತ್ವ ಎಂಬುದು ನಾವು ಅನುಭವಿಸುವ ಸವಲತ್ತುಗಳ ಪ್ರಮಾಣದಲ್ಲಿಲ್ಲ ಬದಲಿಗೆ ನಾವು ಮನುಷ್ಯ ಮನುಷ್ಯರ ನಡುವೆ ಮತ್ತು ನಮ್ಮನ್ನು ಪೋಷಿಸುವ ಭೂಮಿಯೊಂದಿಗೆ ಹೇಗೆ ಸಂಬಂಧವಿಟ್ಟುಕೊಂಡಿದ್ದೇವೆ ಎಂಬುದರ ಮೇಲೆ ನಿಂತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಇದು ಸೂಕ್ತ ಸಮಯ. ನಮ್ಮ ನೆಲ, ಜಲ ಮತ್ತು ಗಾಳಿಯನ್ನು ನಮಗೆ ಹಾಗೂ ನಮ್ಮ ಮುಂದಿನ ಪೀಳಿಗೆಗೆ ಸಂರಕ್ಷಿಸಿಡಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಈ ಅರಿವು ನಮ್ಮನ್ನು ನಮ್ಮ ಅತಿ ಆಸೆಯಿಂದ ಬಚಾವು ಮಾಡಬಲ್ಲುದು. ಶಕ್ತಿಮೂಲಗಳ ಕಡಿಮೆ ಬಳಕೆಯ, ಪರಿಸರದ ಸಂರಕ್ಷಣೆ ಮಾಡುವ ಮತ್ತು ನಮ್ಮನ್ನು ಒಂದು ವ್ಯಕ್ತಿಯಾಗಿ ಮತ್ತು ಸಾಮಾಜಿಕ ನೆಲೆಗಳಲ್ಲಿ ದೈಹಿಕವಾಗಿ, ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಆರೋಗ್ಯವಾಗಿಡಬಲ್ಲ ಜೀವನ ಶೈಲಿಗಳನ್ನು ನಾವು ರೂಢಿಸಿಕೊಳ್ಳಬೇಕಾಗಿದೆ.


## ಶಿಕ್ಷಣಕ್ಕೆ ಸಮಗ್ರ ಮತ್ತು ಪರಿಪೂರ್ಣ ವಿಧಾನದ ಅವಶ್ಯಕತೆ ಇದೆ

ನಮ್ಮ ಮಕ್ಕಳು ಈ ವಾಸ್ತವವನ್ನು ಅರಿತುಕೊಳ್ಳಬೇಕಾದ, ಪರಿಸ್ಥಿತಿಯನ್ನು ಬದಲಾಯಿಸುವ ಸಲುವಾಗಿ ಎಲ್ಲರು ಒಟ್ಟಾಗಿ, ಸೃಜನಾತ್ಮಕವಾಗಿ ಮತ್ತು ಜವಾಬ್ದಾರಿಯಿಂದ ಈ ವಾಸ್ತವವನ್ನು ಎದುರಿಸುವ ಮತ್ತು ಅದಕ್ಕೆ ಪ್ರತಿಸ್ಪಂದಿಸುವ ಆವಶ್ಯಕತೆ ಇದೆ. ಇದರೆಡೆ ನಮ್ಮ ಶಿಕ್ಷಣ ವ್ಯವಸ್ಥೆಯು ತನ್ನ ಕಾರ್ಯಾಚರಣೆಯಲ್ಲಿ ಬದ್ಧತೆಯನ್ನಾಗಲಿ, ಪ್ರತಿಸ್ಪಂದನೆಯನ್ನಾಗಲಿ ತೋರಿಸಿಲ್ಲ. ಇದು ನಮ್ಮ ಜನರಲ್ಲಿ ಕಾಣುವ ಬೇಜವಾಬ್ದಾರಿ ವರ್ತನೆ ಮತ್ತು ಪೌರ ಪ್ರಜ್ಞೆಯ ಕೊರತೆಗೆ ಕಾರಣವಾಗಿದೆ. ಇಷ್ಟೇ ಅಲ್ಲದೆ, ನಮ್ಮ ಶಿಕ್ಷಣ ವ್ಯವಸ್ಥೆಯು ಮಕ್ಕಳಲ್ಲಿ ಮೂಲಭೂತ ಕೌಶಲಗಳನ್ನೂ ಇಲ್ಲವಾಗಿಸುತ್ತಿದೆ, ಈ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಬೇಕಾದ ಅವಶ್ಯಕತೆ ಬಹಳ ಇದೆ. ಜೀವನವನ್ನು ಕೌಶಲಪೂರ್ಣವಾಗಿ, ಮೌಲ್ಯಾಧಾರಿತವಾಗಿ ಮತ್ತು ವಿಶ್ಲೇಷಣಾತ್ಮಕವಾಗಿ ಬದುಕುವಲ್ಲಿ ಅವಶ್ಯವಾದ ಉತ್ತಮ ನೆಲೆಗಟ್ಟನ್ನು ಬೆಳೆಸಲು ಅಗತ್ಯವಾದ ಸಮಗ್ರ ಶಿಕ್ಷಣ ಸಾಧ್ಯವಾಗಿಸುವ ಸವಾಲು ನಮ್ಮ ಮುಂದಿದೆ.

ಐತಹಾಸಿಕವಾಗಿ ಸಮಾಜಗಳು ಬದುಕಿವೆ, ಊರ್ಜಿತವಾಗಿವೆ ಅಥವಾ ಪ್ರಾಕೃತಿಕವಾಗಿ ಸುಸ್ಥಿರವಾಗಿರದ ರೀತಿಯಲ್ಲಿ ಸಂಪನ್ಮೂಲಗಳ ಬಳಕೆ ಮತ್ತು ಸಮುದಾಯದ ಒಳಗಿನ ಜನರೊಂದಿಗೆ ಮತ್ತು ಇತರ ಸಮುದಾಯಗಳೊಂದಿಗಿನ ಸಂಬಂಧಗಳಲ್ಲಿನ ಅಸಮತೋಲನದ ಕಾರಣದಿಂದಾಗಿ ಕುಸಿದು ಬಿದ್ದಿವೆ. ನಮ್ಮದು ಒಂದು ಸಂಕೀರ್ಣ ಸಮಸ್ಯೆಗಳಿರುವ ದೇಶ. ನಾವು ಇತಿಹಾಸದಿಂದ ಪಾಠ ಕಲಿತು ಎಲ್ಲರಿಗಾಗಿ ಅದರಲ್ಲೂ ಮುಖ್ಯವಾಗಿ ನಮ್ಮ ಮುಂದಿನ ಪೀಳಿಗೆಗಾಗಿ ಒಂದು ಸುಸ್ಥಿರ ಭವಿಷ್ಯ ಕಟ್ಟುವಲ್ಲಿ ತೊಡಗಬೇಕಾಗಿದೆ. ನನ್ನ ಪ್ರಕಾರ ಇದರ ಅರ್ಥ ಪ್ರತಿಯೊಬ್ಬ ವ್ಯಕ್ತಿ ಮತ್ತು ಸಮುದಾಯವು ಫಲಪ್ರದವಾಗಿ, ಸೃಜನಾತ್ಮಕವಾಗಿ ಪ್ರತಿಸ್ಪಂದಿಸಲು ಸಮರ್ಥವಾಗಿ, ತಾವೆಲ್ಲೆ ಇರಲಿ ಊರ್ಜಿತವಾಗಿ ಜೀವಿಸುವುದು.

ನಮ್ಮ ವೈಜ್ಞಾನಿಕ ಮತ್ತು ತಾಂತ್ರಿಕ ಆವಿಷ್ಕಾರಗಳು ಈ ದಿಶೆಯಲ್ಲಿ ನಡೆಯಬೇಕು.

ನಾವು ದುರಾಸೆ ಮತ್ತು ಸ್ಪರ್ಧಾತ್ಮಕತೆ "ಮನುಷ್ಯನ ಮೂಲಗುಣ" ಎಂದು ಆಲೋಚಿಸಬಾರದು. 'ನಾವು ಕೇವಲ ಬಳಕೆದಾರರು' ಎಂದು ಗುರುತಿಸಿಕೊಳ್ಳಬಾರದು. ನಾವು ಖಂಡಿತಾ ನಮ್ಮ ಪ್ರತಿಭಾಶಕ್ತಿಯನ್ನು ಬಳಸಿ ಒಂದು ಜೀವಿ ಪ್ರಭೇದವಾಗಿ ಇನ್ನೂ ಚೆನ್ನಾಗಿ ಸುಸಂಘಟಿತವಾದ 'ವಸುದೈವ ಕುಟುಂಬಕಂ' ಅಥವಾ ವಿಶ್ವವೇ ನಮ್ಮಕುಟುಂಬ ಎಂಬ ಮನೋಭಾವವುಳ್ಳ ಒಂದು ವಿವೇಚನಾಶೀಲ ನಾಗರಿಕತೆಯಾಗಿ ನಮ್ಮನ್ನು ರೂಪಿಸಿಕೊಳ್ಳಬಲ್ಲ ನಮ್ಮ ಸಾಮರ್ಥ್ಯದ ಬಗ್ಗೆ ಆತ್ಮವಿಶ್ವಾಸ ದಿಂದ ಮುನ್ನಡೆಯಬಲ್ಲೆವು.






*ಸಸಿತೋಟ ಬೆಳಸುವುದು*



*ಪ್ರಯೋಗದ ಮೂಲಕ ನೀರಿನ ಸಂರಕ್ಷಣೆ*




**ಸುಶಮಾ** ಅವರು ಮಹಾರಾಷ್ಟ್ರದ ಸೇವಾಗ್ರಮದಲ್ಲಿರುವ ಆನಂದ ನಿಕೇತನ ಶಾಲೆಯ ಪ್ರಾಂಶುಪಾಲರು ಮತ್ತು ಅದರ ಸ್ಥಾಪಕ ಸದಸ್ಯರು. ಗಾಂಧೀಜಿಯವರ ತತ್ವಾದರ್ಶಗಳ ಮೇಲೆ ಕಟ್ಟಿರುವ ಆನಂದ ನಿಕೇತನ ಶಾಲೆಯು 3 ರಿಂದ 13 ವರ್ಷದ ವರೆಗಿನ ಮಕ್ಕಳಿಗೆ ಕಲಿಕಾ ಕೇಂದ್ರವಾಗಿದೆ. ಇದನ್ನು 2005ರಲ್ಲಿ ಗಾಂಧಿ ಆಶ್ರಮದ ಆವರಣದಲ್ಲಿ ನೆರೆಹೊರೆಯ ಶಾಲೆಯಾಗಿ ಸ್ಥಾಪಿಸಲಾಯಿತು. ಗಾಂಧೀಜಿಯವರ ಶೈಕ್ಷಣಿಕ ತತ್ವಾದರ್ಶಗಳ ಬೆಳಕಿನಲ್ಲಿ, ದೃಢವಾದ ಮಾನಸಿಕ ಮತ್ತು ಬೌದ್ಧಿಕ ನೆಲೆಗಟ್ಟಿನ ಮೇಲೆ ದುಡಿಮೆ ಆಧಾರಿತ ಪರಿಪೂರ್ಣ ಶಿಕ್ಷಣದ ಪ್ರಯೋಗ ನಡೆಸಿ ಮಾರ್ಗೋಪಾಯಗಳನ್ನು ಹುಡುಕುವಲ್ಲಿ ಸುಶಮಾ ಮತ್ತು ಅವರ ತಂಡ ನಿರತವಾಗಿದೆ. ಪುಣೆ ವಿಶ್ವವಿದ್ಯಾಲಯದಿಂದ ಮಾನವ ಶಾಸ್ತ್ರದಲ್ಲಿ ಮತ್ತು ಮುಂಬೈಯ ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸಯನ್ಸ್ (TISS)ನಿಂದ ಪ್ರಾಥಮಿಕ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಗಳಿಸಿರುವ ಸುಶಮಾ ಅವರು ಕಳೆದ 25 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಮೂಲತಃ ಸಮಾಜ ಸೇವಾ ಮನೋಭಾವದ ಸುಶಮಾ ಸುಮಾರು 15 ವರ್ಷಗಳ ಕಾಲ ಸ್ವಯಂಸೇವಾ ಸಂಸ್ಥೆಗಳೊಂದಿಗೆ ವಾರ್ಧಾ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಪ್ರಾಥಮಿಕ ಶಿಕ್ಷಣ ಮತ್ತು ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಕೇಂದ್ರವಾಗಿಟ್ಟುಕೊಂಡು ಸಮಗ್ರ ಗ್ರಾಮೀಣ ಅಭಿವೃದ್ಧಿ ಸಾಧ್ಯಮಾಡುವ ನೆಲೆಯಲ್ಲಿ ದುಡಿದಿರುವ ಅವರು ಮಹಿಳೆಯರು, ಯುವಜನತೆ ಮತ್ತು ಕೃಷಿಕರೊಡಗೂಡಿ ಸುಸ್ಥಿರ ಅಭಿವೃದ್ಧಿಯ ಸಮಗ್ರ ವಿಧಾನಗಳನ್ನು ಅನ್ವೇಷಿಸುವ ಕೆಲಸ ಮಾಡಿದ್ದಾರೆ. ಅವರ ಮಿಂಚಂಚೆ: sushama.anwda@gmail.com. **ಭಾಷಾಂತರ**: ರೋಸಿ ಡಿಸೌಜಾ, **ಪರಿಶೀಲನೆ**: ವಿನಯ ವಿಠಲ.